VII. ಈ ನಿಬಂಧನೆಯ ರೀತ್ಯಾ ರೆಕಾರ್ಡನ್ನು ನೋಡಬೇಕಾದರೆ, ಪೊಲೀಸ್ ಇನ್‌ಸ್ಪೆಕ್ಟರ ದರ್ಜೆಗೆ ಕಡಮೆಯಿಲ್ಲದ ಪೊಲೀಸ್ ಅಧಿಕಾರಿಯು ನೋಡತಕ್ಕದ್ದು. ಅಂಥಾ ಅವಲೋಕನವು ರೆಕಾರ್ಡು ಇರತಕ್ಕ ಕೋರ್ಟಿನೊಳಗೆ ನಡೆಯತಕ್ಕದ್ದು; ಮತ್ತು ಸೆಷ್ಯನ್ ಜಡ್ಜ್ ಅಥವಾ ಮಾಜಿಸ್ಟ್ರೇಟರು ಇದಕ್ಕಾಗಿ ನೇಮಿಸಿರುವ ಅಧಿಕಾರಿಯ ಮುಂಬರೂ ನಡೆಯತಕ್ಕದ್ದು. ಹಾಗೆ ಅವಲೋಕನವನ್ನು ಮಾಡತಕ್ಕ ಅಧಿಕಾರಿಯು ಕೋರ್ಟಿನ ಆವರ್ಣದಿಂದ ಆ ರಿಕಾರ್ಡನ್ನಾಗಲಿ ಅದರಲ್ಲಿ ಯಾವ ಕಾಗದವನ್ನಾಗಲಿ ಹೊರಕ್ಕೆ ತೆಗದುಕೊಂಡು ಹೋಗಕೂಡದು.

ಆಜ್ಞೆಯ ಪ್ರಕಾರ,
ವಿ. ಎ. ರಾಜರತ್ನ ಮೊದಲಿಯಾರ್,
ಡೆಪ್ಯೂಟಿ ರಜಿಸ್ಟ್ರಾರಾಗಿದ್ದುಕೊಂಡು ರಜಿಸ್ಟ್ರಾರ್ ಕೆಲಸವನ್ನು ನೋಡತಕ್ಕವರು.

ವಿದ್ಯಾಭ್ಯಾಸದ ಇಲಾಖೆ.

E. ನಂಬರ್ 43ನೇ ಪ್ರಕಟನ ಪತ್ರಿಕೆ.

ಸ್ಯ 1895ನೇ ಇಸವಿ ಫಿಬ್ರವರಿ ತಾರೀಖು 18.

ಇದರಡೀ ಕಂಡ ಭಾಷಾಗ್ರಂಥಗಳು ಮೈಸೂರು ವರ್ನಾಕ್ಯುಲರ್ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ. ಈ ಪರೀಕ್ಷೆಯು ಸ್ಯ 1895ನೇ ಡಿಸೆಂಬರ್ ತಿಂಗಳಿನಿಂದ ಮೈಸೂರು ದೇವೇಯ್ಯೋಪಾಧ್ಯಾಯರ ಪರೀಕ್ಷೆಗೆ ಬದಲಾಗಿ ನಡೆಸಲ್ಪಡುವುದು.

ಸ್ಯ 1895ನೇ ಡಿಸೆಂಬರು ತಿಂಗಳಪರೀಕ್ಷಾ ಭಾಷಾಗ್ರಂಥಗಳು.

ಕನ್ನಡ	(1)	ಕಬ್ಬಿಗರಕಾವ . . ಪದ್ಯಗಳು 1—100, ಪುಟಗಳು. 1—23
	(2)	ಕಾದಂಬರಿ ಪದ್ಯಗಳು 377—476.
	(3)	ವಿಕ್ರಮೋರ್ವಶೀನಾಟಕ, ಪಂಡಿತ ಅಯ್ಯಾಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು.
	(4)	ಜಯಸಿಂಹರಾಜ ಚರಿತೆ
ಸಂಸ್ಕೃತ	(1)	ರಘುವಂಶ ಸರ್ಗಗಳು 2 ಮತ್ತು 3
	(2)	ಪಂಚತಂತ್ರಂ (ಮುಂಬೈ ಛಾಪೆ) ಬಂದನೇ ಭಾಗ ಪುಟಗಳು 1—36
ಫಾರಸಿ	(1)	ಸಿಕಂದರ್‌ನಾಮ (ಬ್ರಾ-ರಿ) ಸಿಕಂಡರ್ ಎಂಬಾತನಿಗೋಸ್ಕರ ಬಂದು ದರ್ಪಣವನ್ನು ಮಾಡುವ ಭಾಗದವರಿಗೆ
	(2)	ಅನ್ವಾರಿಸೊಹಲಿ . . ಅಧ್ಯಾಯಗಳು 1—3
ಹಿಂದುಸ್ತಾನಿ	(1)	ದಿವಾನಿ ವಜೀರ್ . . ಎರಡನೇ ಅರ್ಧಭಾಗ
	(2)	ಇಬ್‌ನಲ್‌ವಖ್ತ್

ಸ್ಯ 1896ನೇ ಡಿಸೆಂಬರು ತಿಂಗಳ ಪರೀಕ್ಷಾ ಭಾಷಾ ಗ್ರಂಥಗಳು.

ಕನ್ನಡ	(1)	ಕಬ್ಬಿಗರಕಾವ . . ಪದ್ಯಗಳು 135—239
	(2)	ಕಾದಂಬರಿ . . ಪದ್ಯಗಳು 483—583
	(3)	ನಾಗಾನಂದನಾಟಕ (ಪಂಡಿತ ಅನಂತನಾರಾಯಣ ಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು)
	(4)	ಮುದ್ರಾಮಂಜೂಷ ಆಶ್ವಾಸಗಳು 1—4
ಸಂಸ್ಕೃತ	(1)	ರಘುವಂಶ . . ಸರ್ಗಗಳು 4 ಮತ್ತು 5
	(2)	ಮೂಷ . . ಮೊದಲನೇ ಸರ್ಗ
	(3)	ಪಂಚತಂತ್ರಂ (ಮುಂಬೈ ಛಾಪ) ಬಂದನೇ ಭಾಗ, ಪುಟಗಳು 37—67
ಫಾರಸಿ	(1)	ಬಹರಿಸ್ತಾನಿಜಮಿ
	(2)	ದಿವಾನಿ ಫನಿ
ಹಿಂದುಸ್ತಾನಿ	(1)	ಫರೇಜ್—ಇ-ಸಾನಿ ಬಂದನೇ ಮತ್ತು ಎರಡನೇ ಭಾಗಗಳು (ವೀರರಾಜೇಂದ್ರ ಮುದ್ರಾಕ್ಷರ ಶಾಲೆ, ಪಟ್ಟಣಮೂಲ)
	(2)	ದಿವಾನಿ ಮೋರ್ಮಿ—ಪುಟಗಳು 1—74 ರಡ್ಡಿಫೆ--ಲ್ಯಾಂ, ವರಿಗೆ (ನೋವಲ್‌ಕಿಶೋರ್ ಮುದ್ರಾಕ್ಷರ ಶಾಲೆ)

ಇದರಡೀ ಕಂಡ ಭಾಷಾಗ್ರಂಥಗಳು ಸ್ಯ 1896ನೇ ಇಸವಿ ಡಿಸೆಂಬರು ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ ಪದ್ಯ	(1)	ರಾಮಾಭ್ಯುದಯ ಕಥಾಕುಸುಮಮಂಜರಿ ಸುಂದರ ಕಾಂಡ ಮೊರನೇ ಸಂಧಿ.
	(2)	ಸೂಕ್ತಿಮಂಜರಿ (ಪಂಡಿತ ಶೇತಾರಾಮಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಬಂದನೇ ಭಾಗ
	(3)	ಸುಮತಿಶತಕ (ಪಂಡಿತ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಮೊದಲಿನಿಂದ ಆರಿಸಲ್ಪಟ್ಟ 30 ಪದ್ಯಗಳು.
	(4)	ಪದ್ಯಸಾರ—ಪದ್ಯಗಳು 27—77

ಗದ್ಯ—ಸುಮತಿ ಮದನಕುಮಾರನ ಚರಿತ್ರೆ (ಸ್ಯಾಂಡಿಫರ್ಡ್ ಅಂಡ್ ಮರ್ಟರ್ ಎಂಬ ಗ್ರಂಥದ ಭಾಷಾಂತರ) ಮಿಸ್ಟರ್ ಎಂ. ಎಸ್. ಪುಟ್ಟಣ್ಣ ಬಿ. ಎ. ಯವರಿಂದ ಮಾಡಲ್ಪಟ್ಟದ್ದು. ಪುಟಗಳು 1—100.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಬಂಧೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು—(1) ನಳಚರಿತ್ರಮು
(2) ವೇಣೀಸಂಹಾರ ಮತ್ತು ಮಾಳವಿಕಾಗ್ನಿ ಮಿತ್ರನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಸು ಮತ್ತು ವರ್ನಾಕ್ಯುಲರ್ ಲಿಟರೈಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು)
(3) ಕಂಠಪಾಠ—ನಳಚರಿತ್ರಮು, ಪುಟಗಳು 16—30.

ಅರಬ (1) ಪಂಚತಂತ್ರಂ—ಪ್ರಸ್ತಾವನೆ ಮತ್ತು ಮೊದಲನೇ ಭಾಗ.
(2) ಎರಡನೇ ಸಂಬರ್ ನೀತಿಮಂಜರಿ.
(3) ಕಂಠಪಾಠ—ಎರಡನೇ ನಂಬರ್ ನೀತಿಮಂಜರಿ, ಪದ್ಯಗಳು 65—128.

ಹಿಂದುಸ್ತಾನಿ (1) ಮುಬಾದಿ-ಉಲ್—ಇರ್ಫಾ, ನಾಲ್ಕನೇ ಭಾಗ (ಜಷ್ಮೆ ಫೈಜ್ ಮುದ್ರಾಕ್ಷರಶಾಲೆ, ಡೆಲ್ಲಿ) ಪುಟಗಳು ಸುಮಾರು 100.
(2) ಮುಜ್‌ಮೂವಾ—ಇ-ಸೊರ್ಖ ಎರಡನೇ ಭಾಗದ ಮೊದಲಿನಿಂದ ಅರ್ಧಭಾಗ.

ಸಂಸ್ಕೃತ ಆವಶ್ಯಕ ಭಾಷೆ.
(1) ಚಂಪೂರಾಮಾಯಣ, ಬಂದನೇ ಮತ್ತು ಎರಡನೇ ಕಾಂಡಗಳು (ಮಹಾರಾಣಿಯವರ ಸ್ಕೂಲ್ ಛಾಪ)
(2) ಕುಮಾರ ಸಂಭವ ಆರು ಮತ್ತು ಏಳನೇ ಸರ್ಗಗಳು.

ಸಂಸ್ಕೃತ ಐಚ್ಛಿಕ ಭಾಷೆ.
ವಿಕ್ರಮಾರ್ಕ ಚರಿತ್ರಂ ಮೊದಲನೇ ಎಂಟುಕಥೆಗಳು ಪ್ರಸ್ತಾವನೆ ವಿನಹ.

ಫಾರಸಿ ಆವಶ್ಯಕ ಭಾಷೆ.
(1) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ)
(2) ಸರ್ವಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.

ಫಾರಸಿ ಐಚ್ಛಿಕ ಭಾಷೆ.
(1) ಎರಡನೇ ಫಾರಸಿ ಪುಸ್ತಕ (ಪಂಜಾಬ್ ಛಾಪ)
(2) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.

ಲ್ಯಾಟಿನ್ ಐಚ್ಛಿಕ ಭಾಷೆ.
ಸಿಸರ್ ಡಿಬೆಲೊಗ್ಯಾಲಿಕೊ—ಎರಡನೇ ಪುಸ್ತಕ.

ಹೆಚ್. ಜೆ. ಛಾಛಾ,
ಎಡ್ಯೂಕೇಷನ್ ಸೆಕ್ರೆಟರಿ.

ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಬಳೆಪೇಟೆಯಲ್ಲಿರುವ ಚಿಕ್ಕಣ್ಣನ ವಿಷಯದಲ್ಲಿ—

ಸ್ಯ 1894—95ನೇ ಇಸವಿ ದಿವಾಳಿ ಕೇಸ್ ನಂಬರ್ 130.

ಹುಕುಂ,

ನೋಲ್ಕಂಡ ಚಿಕ್ಕಣ್ಣನು, ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂ ಅರ್ಜಿದಾರನನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 6ನೇ ಬೆಂಗಳೂರು ಪೆಟ್ಟಯ್ಯನಪೇಟೆಯಲ್ಲಿರುವ ದೇವಾಂಗದ ಹೊನ್ನಪ್ಪನ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಬೆಂಗಳೂರು ಜೋರಿಪೇಟೇಲಿರುವ ದೇವಾಂಗದ ಬಳ್ಳಾಪುರದ ವೆಂಕಟರಮಣಪ್ಪ, 2ನೇ ಬೆಂಗಳೂರು ನಗರ್ತರಪೇಟೇಲಿರುವ ಆಣ್ಣಂಡಿ ಮರಿಯಪ್ಪ, 3ನೇ ಬೆಂಗಳೂರು ದೊಡ್ಡಪೇಟೆಲಿರುವ ನೂಲಿನ ಅಂಗಡಿ ಈಶ್ವರಪ್ಪ, 4ನೇ ಬೆಂಗಳೂರು ತಾರಾಮಂಡ್ಲಪೇಟೇಲಿರುವ ಚಾರುಮಯ್ಯನವರ ನಂಜುಂಡಪ್ಪ, 5ನೇ ಬೆಂಗಳೂರು ಲಿಂಗಕಟ್ಟಪೇಟೇಲಿರುವ ದೇವಾಂಗದ ಲಿಂಗಣ್ಣ.